

ಡಾ.ವಿನೋದ ಛೆಬ್ಬಿ

ವ್ಯಕ್ತಿ ಸ್ವಾತಂತ್ರ್ಯಕ್ಕೂ ಕಾಮಾಸಕ್ತಿಯ ಸ್ವಚ್ಛಂದ ಅಭಿವ್ಯಕ್ತಿಗೂ ನಂಟಿದೆಯೆ?

# 101: ಪ್ರಣಯಭಾವದ ಏರಿಳಿತ

ಕೆಲವರು ತಾವೊಬ್ಬರೇ ಕಾಮತೃಪ್ತಿ ಹೊಂದಬಲ್ಲವರಾದರೂ ಸಂಗಾತಿಯ ಜೊತೆಗಿನ ಕಾಮಕೂಟದಲ್ಲಿ ಮುಕ್ತಮನಸ್ಸಿನಿಂದ ಒಳಗೊಳ್ಳಲಾರರು ಎಂದು ಹೋದಸಲ ಮಾತಾಡುತ್ತಿದ್ದೆವು. ಅಷ್ಟೊಂದು ಸಹಜ– ಸುಗಮವಾಗಿ ಪ್ರಕಟವಾಗಬೇಕಾದ ಕಾಮಪ್ರವೃತ್ತಿಯು ಸಂಗಾತಿಯ ಜೊತೆಗಿರುವಾಗ ಸ್ವಯಂಸ್ಫೂರ್ತಿಯನ್ನು ಕಳೆದುಕೊಂಡು ನೇಪಥ್ಯ ಸೇರಲು ಏನು ಕಾರಣ ಎಂದು ಈ ಸಲ ಪರಿಶೀಲಿಸೋಣ.

ಹಸಿ ಕಾಮಾಪೇಕ್ಷೆಯು ಹುಟ್ಟುಗುಣವಾದರೂ ಒಡನಾಟದಲ್ಲಿ ಯಾವ ತಿರುವು ಪಡೆದುಕೊಳ್ಳಬಹುದು ಎಂಬುದರ ಕುರಿತು ಮನೋಲೈಂಗಿಕ ಶಾಸ್ತ್ರಜ್ಞೆ 'ಎಸ್ತರ್ ಪೆರೆಲ್' ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಮಾನವರ ಹಸಿ ಕಾಮಪ್ರವೃತ್ತಿ ಹಾಗೂ ಸಂಗಾತಿಯೊಡನೆಯ ಪ್ರಣಯಭಾವಗಳ ನಡುವಿನ ಸಂಬಂಧದ ಕುರಿತು ಈಕೆ ಮುಂದಿಟ್ಟಿರುವ ಒಂದು ಸಿದ್ಧಾಂತವು ಉತ್ಸುಕತೆ ಹುಟ್ಟಿಸುವಂತಿದೆ. ಇದನ್ನು ಅರ್ಥೈಸಿಕೊಳ್ಳಲು ಒಂದು ದೃಶ್ಯವನ್ನು ಕಲ್ಪಿಸಿಕೊಳ್ಳಿ: ತಾಯಿ ಆರಾಮವಾಗಿ ಕೂತುಕೊಂಡು ಟೀವಿ ನೋಡುತ್ತಿದ್ದಾಳೆ. ಆಕೆಯ ಮಡಿಲಲ್ಲಿ ಮೂರು ವರ್ಷದ ಬಾಲಕ ಆಟವಾಡುತ್ತಿದ್ದಾನೆ. (ಇಲ್ಲಿ 'ಬಾಲಕ' ಹಾಗೂ 'ತಾಯಿ' ಪದಗಳಲ್ಲಿ ಲಿಂಗನಿರ್ದಿಷ್ಟತೆ ಇಲ್ಲ– ಇದು ಕೇವಲ ಅನುಕೂಲಕ್ಕಾಗಿಯಷ್ಟೆ. ತಾಯಿಯ ಬದಲಾಗಿ ತಂದೆ ಅಥವಾ ಯಾವುದೇ ಪೋಷಕರು, ಹಾಗೂ ಬಾಲಕನ ಬದಲು ಬಾಲಕಿ ಎಂದೂ ಆಗಬಹುದು.) ಬಾಲಕ ಹೇಳುತ್ತಾನೆ: 'ಅಮ್ಮಾ, ನಾನು ಹೊರಗೆ ಹೋಗಿ ಆಟ ಆಡ್ತೀನೆ.' ಇದಕ್ಕೆ ತಾಯಿಯ ಪ್ರತಿಕ್ರಿಯೆಯು ಈ ಕೆಳಗಿನ ಮೂರರಲ್ಲಿ ಯಾವುದಾದರೂ ಇರಬಹುದು:

ಸಂದರ್ಭ ಒಂದು: 'ಧಾರಾಳವಾಗಿ ಹೋಗು ಮಗೂ. ಜಗತ್ತು ವಿಶಾಲವಾಗಿದೆ. ನಿನ್ನಿಷ್ಟದಂತೆ ಅನುಭವಿಸುತ್ತ ಖುಷಿ ಕಂಡುಕೋ. ಸಾಕೆನ್ನುವಾಗ ಮರಳಿ ಬಾ. ರುಚಿಯಾದ ತಿಂಡಿ ಇಟ್ಟಿರುತ್ತೇನೆ.' ಬಾಲಕ ಬಾಣ ಬಿಟ್ಟಂತೆ ಹೊರಗೆ ಓಡುತ್ತಾನೆ. ಹೊರಜಗತ್ತಿನ ಭಾಗವಾಗುತ್ತಾನೆ. ಪ್ರಕೃತಿ ಹಾಗೂ ಲೌಕಿಕ ವ್ಯವಹಾರಗಳನ್ನು ಕೌತುಕದಿಂದ ಗಮನಿಸುತ್ತ ಹೊತ್ತುಗೊತ್ತಿಲ್ಲದೆ ಮೈಮರೆಯುತ್ತಾನೆ. ಎಟುಕುವುದನ್ನೆಲ್ಲ ಹೀರಿಕೊಳ್ಳುತ್ತ ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ. ಸಹಜ–ಸುಗಮತೆಯಿಂದ (spontaneity) ಜೀವಂತಿಕೆಯನ್ನು ಅರಳಿಸಿಕೊಳ್ಳುತ್ತಾನೆ. ಮನಸಾರೆ 'ಬದುಕಿ' ಸಂತೃಪ್ತಿಗೊಂಡ ನಂತರ ತಾಯಿಯ ಮಡಿಲಿಗೆ ಮರಳುತ್ತಾನೆ. ತಿಂಡಿ ತಿನ್ನುತ್ತ ಅಮ್ಮನೊಂದಿಗೆ ಅನುಭವವನ್ನು ಹಂಚಿಕೊಳ್ಳುತ್ತಾನೆ. ಇಲ್ಲಿ ಅವನ ಸ್ವಚ್ಛಂದತೆಯ ಹಿಂದಿನ ಕಾರಣ ಏನು? ತಾಯಿಯಿಂದ ಸಂತತ ಆಸರೆ, ಭದ್ರಭಾವದ ಭರವಸೆ, ಹಾಗೂ ವ್ಯಕ್ತಿಸ್ವಾತಂತ್ರ್ಯಕ್ಕೆ ಪೂರ್ಣಾವಕಾಶ. ಇಂಥವರು ಬೆಳೆದು ಪ್ರಬುದ್ಧರಾದಾಗ ಭಾವನಾತ್ಮಕವಾಗಿ ಸ್ವಾಯತ್ತತೆಯನ್ನು ಹೊಂದುತ್ತ ತಮ್ಮದೊಂದು ವಿಶಿಷ್ಟ ಸ್ವಂತಿಕೆಯನ್ನು ಬೆಳೆಸಿಕೊಂಡು ಜೀವಂತಿಕೆಯ ಬದುಕು ಬದುಕುತ್ತಾರೆ. ಚಿಕ್ಕ ವಿಷಯಗಳಿಗೂ ಆಸಕ್ತಿ ತೋರಿಸುತ್ತ, ಅನ್ವೇಷಿಸುತ್ತ ಪ್ರಯೋಗಶೀಲರಾಗಿರುತ್ತಾರೆ. ಅವರ ಈ ಸ್ವಭಾವವು ಕಾಮಕೂಟದಲ್ಲೂ ಪ್ರತಿಫಲಿಸುತ್ತದೆ. ಕಾಮಕ್ರೀಡೆಯಲ್ಲಿ ಸಂಗಾತಿಯ ಜೊತೆಗೆ ಮನಃಪೂರ್ತಿ ಪಾಲುಗೊಳ್ಳುತ್ತಾರೆ. ಸಂಗಾತಿಯ ಜೊತೆಗೆ ನಡೆಸುವ ಎಲ್ಲದಕ್ಕೂ ಜೀವಂತಿಕೆಯ ಸ್ಪರ್ಶ ಕೊಡುತ್ತಾರೆ. ರೋಚಕತೆಯನ್ನು ಅನುಭವಿಸುತ್ತ, ವೈವಿಧ್ಯತೆಯನ್ನು ಅರಸುತ್ತ ದೀರ್ಘಕಾಲ ಸುಖಿಪಡುತ್ತಾರೆ. ಇವರನ್ನು ಸ್ವಚ್ಛಂದ ಪ್ರಣಯಿಗಳು ಎಂದು ಕರೆಯೋಣ. ಇದಕ್ಕೆ ದೃಷ್ಟಾಂತವಾಗಿ ನನಗೆ ಗೊತ್ತಿರುವ ಜೋಡಿ ಇದ್ದಾರೆ. ಅವನಿಗೆ ಎಂಬತ್ತು, ಅವಳಿಗೆ ಎಪ್ಪತ್ತೈದು ವರ್ಷ. ಈಗಲೂ ಅವರು ತಿಂಗಳಿಗೊಮ್ಮೆಯಾದರೂ ಕಾಮಕೂಟದಲ್ಲಿ ತೊಡಗುತ್ತಾರೆ. ನಾನಾರೀತಿ ಸುಖಿಪಡುತ್ತ ತಾರುಣ್ಯ ಉಳಿಸಿಕೊಂಡಿದ್ದಾರೆ. ವಿಶೇಷ ಏನೆಂದರೆ, ಗಂಡನ ಶಿಶ್ನದ ನಿಮಿರುವಿಕೆ ಹೊರಟುಹೋಗಿ ಸುಮಾರು ವರ್ಷ ಆಗಿದೆ!

ಸಂದರ್ಭ ಎರಡು: ಬಾಲಕ ಹೊರಗೆ ಹೋಗುವ ಅಪೇಕ್ಷೆ ತೋರಿದಾಗ ಅಮ್ಮ, 'ಅಯ್ಯೋ ಬೇಡ! ನಿನಗೆ ಏನಾದರೂ ಆಗಿಬಿಟ್ಟರೆ ನನಗೆ ಗಾಬರಿ ಆಗುತ್ತದೆ!' ಎಂದು ಆತಂಕ ತೋರುತ್ತಾಳೆ. ಆಗ ಬಾಲಕ ಏನು ಮಾಡುತ್ತಾನೆ? ಅಮ್ಮನ ಗಾಬರಿಗೆ ಆತಂಕಗೊಳ್ಳುತ್ತಾನೆ. ಅತಿರಕ್ಷಿತನಾಗಿ (overprotected) ಮನೆಯಲ್ಲಿಯೇ ಉಳಿಯುತ್ತ ಹೊರಪ್ರಪಂಚವನ್ನು ಅರಿಯುವ ಕುತೂಹಲವನ್ನು ಹತ್ತಿಕ್ಕುತ್ತಾನೆ. ಯಾಕೆ? ಸ್ವಾಯತ್ತತೆಯನ್ನು ಪಡೆಯಬೇಕಾದರೆ (ತಾಯಿಯಿಂದ ಬರುವ) ಭದ್ರತಾಭಾವವನ್ನು ಕಳೆದುಕೊಳ್ಳಬೇಕು; ಒಂದು ವೇಳೆ ಹಾಗಾದರೆ ಅನಾಹುತ ಕಟ್ಟಿಟ್ಟದ್ದು – ಯಾಕೆಂದರೆ ಬದುಕಲು ಮೊದಲ ಅಗತ್ಯವೇ ಅದು. ಹೀಗೆ ಭದ್ರತಾಭಾವವನ್ನು ಉಳಿಸಿಕೊಳ್ಳಲು ಸ್ವಚ್ಛಂದತೆಯನ್ನು ಬಲಿಕೊಡುತ್ತಾನೆ. ಅಷ್ಟಲ್ಲದೆ ತಾಯಿಯ ಆತಂಕಕ್ಕೆ ಕಾಳಜಿ ತೋರಿಸುತ್ತ, ಅದರ ನಿವಾರಣೆಯ ಹೊಣೆಯನ್ನು ಹೊತ್ತುಕೊಳ್ಳುವ ಗುಣವನ್ನೂ ಬೆಳೆಸಿಕೊಳ್ಳುತ್ತಾನೆ.

ಇಂಥವರು ಬೆಳೆದು ಪ್ರಬುದ್ಧರಾದಾಗ ಸ್ವಂತಿಕೆಯನ್ನು ಅರಳಿಸಿಕೊಳ್ಳದೆ ವಿಧೇಯತೆ ಬೆಳೆಸಿಕೊಂಡಿರುತ್ತಾರೆ. ತಮಗೆ ಬೇಕಾದುದನ್ನು ವ್ಯಕ್ತಪಡಿಸಲು, ತಮ್ಮಿಷ್ಟದಂತೆ ಬದುಕಲು ಅವರಿಗೇನೋ ಅಳುಕು. ಸಂಗಾತಿಗೋಸ್ಕರ – ಕಿರಿಕಿರಿಯಾದರೂ ಸರಿ, ಎಲ್ಲವನ್ನೂ ಮಾಡುತ್ತ ಕರ್ತವ್ಯನಿಷ್ಠೆ ಮೆರೆಯುತ್ತಾರೆ. ಇಂಥವರನ್ನು ವಿಧೇಯ ಪ್ರಣಯಿಗಳು ಎಂದು ಕರೆಯೋಣ.

'ಗಂಡ ಕೇಳಿದಾಗ ಸುಖ ಕೊಡುವುದು ನನ್ನ ಕರ್ತವ್ಯ, ಆದರೆ ನಾನು ಬಯಸಬಾರದು' ಎನ್ನುವ ಹೆಂಗಸರು ಈ ಗುಂಪಿಗೆ ಸೇರುತ್ತಾರೆ. ಇಲ್ಲೊಬ್ಬ ತರುಣನಿಗೆ ಅನುಕೂಲ ಪತ್ನಿಯಿದ್ದಾಳೆ. ಸಂಭೋಗಕ್ಕೆ ಯಾವಾಗ ಕರೆದರೂ ಆಕೆ ಇಲ್ಲವೆನ್ನುವುದಿಲ್ಲ. ಆದರೆ ಆಕೆಗೆ ಸುಖಕೊಡಲು ಹೊರಟಾಗ ನವಿರಾಗಿ ನಿರಾಕರಿಸುತ್ತಾಳೆ. ಅವನ ವೈವಿಧ್ಯತೆಗಳಿಗೆ ಕತ್ತರಿಹಾಕುತ್ತಾಳೆ. ಅನಿವಾರ್ಯವಾದರೆ ಸಹಕರಿಸುತ್ತಾಳಷ್ಟೆ. ಗಂಡ ಹೇಳುವಂತೆ ಅವಳು 'ಐವತ್ತು ವರ್ಷ ಮುಂಚೆ ಹುಟ್ಟಿದವಳಂತೆ' ಇದ್ದಾಳೆ.

ಸಂದರ್ಭ ಮೂರು: ಬಾಲಕ ಹೊರಗೆ ಹೋಗಬೇಕೆಂದಾಗ ತಾಯಿ ಆತಂಕ ತೋರುತ್ತಾಳೆ. ಆಗವನು ಮೊದಮೊದಲು ವಿಧೇಯತೆ ತೋರಿಸುತ್ತಾನೆ. ಸ್ವಲ್ಪ ಬುದ್ಧಿ ಬಲಿತಾಗ ತಾಯಿಯ ಕಣ್ಣುತಪ್ಪಿಸಿ ಹೊರಗೆ ಓಡುತ್ತಾನೆ. ಶಿಕ್ಷಿಸಿದರೆ ಧಿಕ್ಕರಿಸುತ್ತ, ದಂಗೆಕೋರತನ ತೋರುತ್ತ ಜಿದ್ದು ಸಾಧಿಸುತ್ತಾನೆ. ಹೀಗಿರುವಾಗ ಅವನ ಮನಸ್ಥಿತಿ ಹೇಗಿರುತ್ತದೆ? ಮನೆಯಲ್ಲಿರುವಾಗ ಹೊರಗಿನ ವಿಷಯಗಳ ಬಗೆಗೆ ಅನ್ಯಮನಸ್ಕನಾಗಿರುತ್ತಾನೆ, ಹಾಗೂ ಹೊರಗೆ ಇರುವಾಗ ತಾಯಿಯ ಭದ್ರಭಾವವನ್ನು ಕಳೆದುಕೊಳ್ಳುವುದರ ಬಗೆಗೆ ಚಿಂತಿಸುತ್ತ ಇರುತ್ತಾನೆ. ಹಾಗಾಗಿ ಎರಡರಲ್ಲೂ ಸುಖಿಪಡಲು ಆಗುವುದಿಲ್ಲ. ಇಂಥವರು ಪ್ರಬುದ್ಧರಾದಮೇಲೆ ಸಂಗಾತಿಯೊಡನೆ ತೋರುವ ಕಾಮವರ್ತನೆಯಲ್ಲಿ ತೀವ್ರ ಏರಿಳಿತಗಳಾಗುತ್ತ ಇರುತ್ತವೆ. ಕೆಲವೊಮ್ಮೆ ಆಸಕ್ತಿ ತೋರಿಸುತ್ತಿದ್ದರೆ ಇನ್ನು ಕೆಲವೊಮ್ಮೆ ವಿಮುಖರಾಗಬಹುದು. ಕೈಯಲ್ಲಿರುವ ಸುಖವನ್ನು ಅನುಭವಿಸುವುದರ ಬದಲು ಕೊರತೆಯನ್ನು ಕಾಣುತ್ತ ಕೊರಗಬಹುದು. ಆಗಾಗ ದಂಗೆಯೇಳುತ್ತ ಸಂಗಾತಿಯಿಂದ ದೂರವಾಗಬಹುದು. ಸಂಗಾತಿಯೊಡನೆ ಅನುಭವಿಸಿದ ನಂತರವೂ ಹಪಹಪಿ ಉಳಿಯಬಹುದು. ಪರಿಶ್ರಮಪಟ್ಟು ಕಟ್ಟಿಕೊಂಡ ಸಂಗಾತಿಯಲ್ಲಿ ಬೇಗ ಆಸಕ್ತಿ ಕಳೆದುಕೊಳ್ಳುತ್ತ ಜಿದ್ದು ಸಾಧಿಸಲು ನೋಡಬಹುದು. ಇಂಥವರನ್ನು ದಂಗೆಕೋರ ಪ್ರಣಯಿಗಳು ಎಂದು ಕರೆಯಬಹುದು. ಒಬ್ಬಳು ಹಳ್ಳಿಯ ಹುಡುಗಿ ತನ್ನ ಗಂಡನ ಬಗೆಗೆ ಹೇಳಿಕೊಂಡಿದ್ದು ಹೀಗೆ: 'ಲಗ್ನಕ್ಕಿಂತಾ ಮುಂಚೆ ಮೈಮ್ಯಾಲೆ ಬೀಳಲಿಕ್ಕೆ ಬರತಿದ್ದನ್ರೀ. ಲಗ್ನಾದ ಮ್ಯಾಲ ಹತ್ತಾರ ಬರವಲ್ಲನ್ರೀ. ಯಾಕಂತ ಕೇಳಿದ್ರ, ಲಗ್ನಕ್ಕಿಂತಾ ಮುಂಚೆ ನೀ ಬ್ಯಾಡಂದಿದ್ದು ಇನ್ನೂ ತಲ್ಯಾಗ ಐತಿ, ಅದನ್ನ ಮರೀಲಿಕ್ಕಿ ಆಗವಲ್ಲದು ಅಂತಾನ್ರೀ!"

ಸ್ವಚ್ಛಂದ ಕಾಮಾಸಕ್ತಿಯು ಮುಕ್ತವಾಗಿ ಪ್ರಕಟವಾಗಬೇಕಾದರೆ ವ್ಯಕ್ತಿಸ್ವಾತಂತ್ರ್ಯ ಇರಲೇಬೇಕು! ತಮಗೆ ಕಾಮಾಸಕ್ತಿ ಕಡಿಮೆ ಎಂದು ಹೇಳಿಕೊಳ್ಳುವವರಲ್ಲಿ ಹೆಚ್ಚಿನವರಿಗೆ ಈ ಕಾರಣ ಇರಲೂ ಸಾಕು!

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org